**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1571/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಕೆ.ಯು ಪಲ್ಲವಿ | ಪ್ರಾಸಾ-3 |
| ತಂದೆಯ ಹೆಸರು | : ಅಣ್ಣಪ್ಪ | ಚಾಸಾ-25 |
| ವಯಸ್ಸು | : 15 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವಿದ್ಯಾರ್ಥಿ | ದಿನಾಂಕಃ 26.09.2025 |
| ವಾಸಸ್ಥಳ | : ಪಲ್ಗುಣಿ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಈ ಪ್ರಕರಣದಲ್ಲಿರುವ ಮೃತ ಪಟ್ಟಿರುವ ರಚನಾ ನನ್ನ ಅಕ್ಕ ಮತ್ತು ಇನ್ನೋರ್ವ ಮೃತ ಪಟ್ಟ ವ್ಯಕ್ತಿಯಾದ ಪಾರ್ವತಮ್ಮ ನನ್ನ ಚಿಕ್ಕಮ್ಮ. ಚಾಸಾ-2 ರವರ ಪರಿಚಯ ನನಗಿದೆ. ಈ ಪ್ರಕರಣದ ಇನ್ನೋರ್ವ ಮೃತರಾದ ರಾಜು ಎಂಬುವವರ ಪರಿಚಯ ನನಗಿಲ್ಲ.

ಕಳೆದ 2 ವರ್ಷಗಳ ಹಿಂದೆ ಹೊಸಹಳ್ಳಿ ಗ್ರಾಮದ ಮೃತ ಪಾರ್ವತಿ ರವರ ಮನೆಗೆ ನಾನೊಬ್ಬಳೇ ಹೋಗಿರುತ್ತೇನೆ. ನಂತರ ಸದರಿ ಊರಿನಲ್ಲಿ ಗಣಪತಿ ವಿಸರ್ಜನೆ ಮಾಡಲು ಗಣಪತಿಯನ್ನು ಹೊರಡಿಸಿರುತ್ತಾರೆ. ನಂತರ ಗಣಪತಿ ವಿಸರ್ಜನೆಯ ನಂತರ ನಾವು ಮನೆಗೆ ಹಿಂತಿರುಗುವಾಗ ಜೋರಾದ ಮಳೆ ಮತ್ತು ಗಾಳಿ ಬಂದ ಕಾರಣ ನಾವುಗಳು ಒದ್ದೆಯಾಗಿರುತ್ತೇವೆ ನಂತರ ಗಣಪತಿ ವಿಸರ್ಜನೆ ಮಾಡಿದ ಟ್ರಾಕ್ಟರ್ ನಲ್ಲಿ ಮಳೆ ಇದ್ದ ಕಾರಣ ನಾನು, ಮೃತ ಪಾರ್ವತಿ ಅವರ ಗಂಡನಾದ ಪ್ರಸನ್ನ ರವರು ಟ್ರಾಕ್ಟರ್ ನ ಟ್ರಾಲಿಯ ಮೇಲೆ ಕೂತಿರುತ್ತೇವೆ. ಟ್ರಾಕ್ಟರ್ ಅನ್ನು ಚಾಲಕರು ನಿಧಾನವಾಗಿಯೇ ಚಲಾಯಿಸುತ್ತಿದ್ದರು ಆದರೆ ಗಾಳಿ ಮಳೆ ಜೋರಾಗಿ ಇದ್ದ ಕಾರಣ ವಿದ್ಯುತ್ ತಂತಿಯು ಕೆಳಗೆ ಬಾಗಿದ್ದ ಕಾರಣ ಟ್ರಾಕ್ಟರ್ ಗೆ ಅದು ತಗುಲಿ ಅಪಘಾತ ಸಂಭವಿಸಿರುತ್ತದೆ. ಸದರಿ ಟ್ರಾಕ್ಟರ್ ನ ಸಂಖ್ಯೆ ಮತ್ತು ಅದರ ಮಾಲಿಕರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಪಘಾತದಲ್ಲಿ ನನಗೂ ವಿದ್ಯುತ್ ಸ್ಪರ್ಶದಿಂದ ಪ್ರಜ್ಞೆ ತಪ್ಪಿರುತ್ತೇನೆ. ನಾನು ಹಾಸನದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಆದರೆ ಆಸ್ಪತ್ರೆಯ ಹೆಸರು ತಿಳಿದಿರುವುದಿಲ್ಲ. ಅಪಘಾತ ಸಂಭವಿಸಿದ ನಂತರ ಏನಾಯಿತು ಎಂದು ನನಗೆ ತಿಳಿದಿರುವುದಿಲ್ಲ ಮತ್ತು ನಾನು ಯಾರ ಬಳಿಯೂ ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.06.09.2022 ರಂದು ಹೊಸಹಳ್ಳಿ ಗ್ರಾಮದ ಗಣಪತಿ ವಿಸರ್ಜನೆಗೆ ನಾನು ಹೋಗಿರುತ್ತೇನೆ ಎಂದರೆ ಸರಿ. ಸದರಿ ವಿಸರ್ಜನೆಗೆ ಬಳಸಿದ್ದ ಟ್ರಾಕ್ಟರ್ 2 ನೇ ಆರೋಪಿಗೆ ಸಂಭಂದಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ನ ಸಂಖ್ಯೆ KA-18-TA-3151 ಮತ್ತು KA-18-TA-3152 ಎಂದು ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆ ದಿನ ಟ್ರಾಕ್ಟರ್ ನ್ನು 1 ನೇ ಆರೋಪಿಯ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿಯು ಅತಿವೇಗ ಮತ್ತು ಅಜಾಗ್ರಕತೆಯಿಂದ ಚಲಾಯಿಸಿದ ಕಾರಣ ಟ್ರಾಕ್ಟರ್ ನ ಟ್ರೈಲರ್ ಮೇಲಿದ್ದ ಪ್ಲೈವುಡ್ ನ ಪ್ರಭಾವಳಿಯ ತುದಿಗೆ ವಿದ್ಯುತ್ ಲೈನ್ ತಾಕಿ ವಿದ್ಯುತ್ ಅವಗಡ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಯು ದಿ.13.10.2022 ರ ತನ್ನ ಹೇಳಿಕೆಯ ಸಂಪೂರ್ಣ ಭಾಗವನ್ನು ಅಲ್ಲಗಳೆದ ಕಾರಣ, ಸದರಿ ಹೇಳಿಕೆಯ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು. ನಿಪಿ-8 ಮತ್ತು 9 ರಲ್ಲಿ ಕಾಣುವ ಟ್ರಾಕ್ಟರ್ ನಲ್ಲಿ ನಾನು ಆ ದಿನ ಪ್ರಯಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಟ್ರಾಕ್ಟರ್ ನ ಮಾಲಿಕರಾದ 1 ಮತ್ತು 2 ನೇ ಆರೋಪಿಗಳ ಪರಿಚಯ ನನಗಿದ್ದ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಮತ್ತು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ**

ಈ ಪ್ರಕರಣದಲ್ಲಿ ಮೃತಗೊಂಡ ವ್ಯಕ್ತಿಗಳಾದ ಪಾರ್ವತಿ, ರಚನಾ ಮತ್ತು ರಾಜು ಎಂಬುವವರಿಗೆ ಮೆಸ್ಕಾಂ ರವರು ರೂ.5,00,000/- ಗಳಂತೆ ಪರಿಹಾರ ನೀಡಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ನನಗೂ ಮತ್ತು ಚಾಸಾ-26 ರವರಿಗೆ ರೂ.20,000/- ದಂತೆ ಪರಿಹಾರ ನೀಡುರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಪರಿಹಾರ ನೀಡಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1571/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಗೌರಮ್ಮ | ಪ್ರಾಸಾ-4 |
| ಗಂಡನ ಹೆಸರು | : ಮಂಜಯ್ಯ | ಚಾಸಾ-26 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 26.09.2025 |
| ವಾಸಸ್ಥಳ | : ಹೊಸಹಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯ ಪರಿಚಯ ನನಗಿಲ್ಲ. 1 ನೇ ಆರೋಪಿಯು ನಮ್ಮ ಊರಿನವರಾಗಿರುತ್ತಾರೆ. 1 ನೇ ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿರುವ ಮೃತ ಪಟ್ಟಿರುವ ರಚನಾ, ಪಾರ್ವತಮ್ಮ ಮತ್ತು ರಾಜು ರವರು ನಮ್ಮ ಊರಿನವರೇ ಆಗಿರುತ್ತಾರೆ. ಚಾಸಾ-25 ರವರ ಪರಿಚಯ ನನಗಿಲ್ಲ.

ಕಳೆದ 3 ವರ್ಷಗಳ ಹಿಂದೆ ಹೊಸಹಳ್ಳಿ ಗ್ರಾಮದ ಗಣಪತಿ ವಿಸರ್ಜನೆ ಮಾಡಲು ಗಣಪತಿಯನ್ನು ಹೊರಡಿಸಿರುತ್ತಾರೆ. ನಂತರ ಗಣಪತಿ ವಿಸರ್ಜನೆಯ ನಂತರ ನಾವು ಮನೆಗೆ ಹಿಂತಿರುಗುವಾಗ ಜೋರಾದ ಮಳೆ ಮತ್ತು ಗಾಳಿ ಬಂದ ಕಾರಣ ನಾವುಗಳು ಒದ್ದೆಯಾಗಿರುತ್ತೇವೆ ನಂತರ ಗಣಪತಿ ವಿಸರ್ಜನೆ ಮಾಡಿದ ಟ್ರಾಕ್ಟರ್ ನಲ್ಲಿ ಮಳೆ ಇದ್ದ ಕಾರಣ ನಾನು, ಮೃತ ಪಾರ್ವತಿ ಅವರ ಗಂಡನಾದ ಪ್ರಸನ್ನ, ಮೃತ ರಚನಾ ಮತ್ತು ರಾಜು ರವರು ಟ್ರಾಕ್ಟರ್ ನ ಟ್ರಾಲಿಯ ಮೇಲೆ ಕೂತಿರುತ್ತೇವೆ. ಟ್ರಾಕ್ಟರ್ ಅನ್ನು ಚಾಲಕರು ನಿಧಾನವಾಗಿಯೇ ಚಲಾಯಿಸುತ್ತಿದ್ದರು ಆದರೆ ಗಾಳಿ ಮಳೆ ಜೋರಾಗಿ ಇದ್ದ ಕಾರಣ ವಿದ್ಯುತ್ ತಂತಿಯು ಕೆಳಗೆ ಬಾಗಿದ್ದ ಕಾರಣ ಟ್ರಾಕ್ಟರ್ ಗೆ ಅದು ತಗುಲಿ ಅಪಘಾತ ಸಂಭವಿಸಿರುತ್ತದೆ. ಸದರಿ ಟ್ರಾಕ್ಟರ್ ನ್ನು 1 ನೇ ಆರೋಪಿಯು ಚಲಾಯಿಸುತ್ತಿದ್ದರು. ಆ ದಿನ ಮಳೆ ಗಾಳಿ ಜೋರಾಗಿ ಇದ್ದ ಕಾರಣ ವಿದ್ಯುತ್ ತಂತಿಯು ಕೆಳಗೆ ಬಾಗಿರುತ್ತದೆ, ಚಾಲಕನು ನಿಧಾನವಾಗಿ ಟ್ರಾಕ್ಟರ್ ನ್ನು ಚಲಾಯಿಸುತ್ತಿದ್ದರು ಕೆಳಗೆ ಬಾಗಿದ್ದ ವಿದ್ಯುತ್ ತಂತಿಯು ಟ್ರಾಕ್ಟರ್ ಗೆ ತಗುಲಿರುತ್ತದೆ. ಸದರಿ ಅವಗಡದಲ್ಲಿ ನನಗೂ ವಿದ್ಯುತ್ ಸ್ಪರ್ಶದಿಂದ ಪ್ರಜ್ಞೆ ತಪ್ಪಿರುತ್ತೇನೆ. ನಂತರ ಮೂಡಿಗೆರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

ಅಪಘಾತ ಸಂಭವಿಸಿದ ನಂತರ ಏನಾಯಿತು ಎಂದು ನನಗೆ ತಿಳಿದಿರುವುದಿಲ್ಲ ಮತ್ತು ನಾನು ಯಾರ ಬಳಿಯೂ ಕೇಳಿ ತಿಳಿದುಕೊಂಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.06.09.2022 ರಂದು ಹೊಸಹಳ್ಳಿ ಗ್ರಾಮದ ಗಣಪತಿ ವಿಸರ್ಜನೆಗೆ ನಾನು ಹೋಗಿರುತ್ತೇನೆ ಎಂದರೆ ಸರಿ. ಸದರಿ ವಿಸರ್ಜನೆಗೆ ಬಳಸಿದ್ದ ಟ್ರಾಕ್ಟರ್ 2 ನೇ ಆರೋಪಿಗೆ ಸಂಭಂದಿಸಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರ್ ನ ಸಂಖ್ಯೆ KA-18-TA-3151 ಮತ್ತು KA-18-TA-3152 ಎಂದು ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆ ದಿನ ಟ್ರಾಕ್ಟರ್ ನ್ನು 1 ನೇ ಆರೋಪಿಯ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿಯು ಅತಿವೇಗ ಮತ್ತು ಅಜಾಗ್ರಕತೆಯಿಂದ ಚಲಾಯಿಸಿದ ಕಾರಣ ಟ್ರಾಕ್ಟರ್ ನ ಟ್ರೈಲರ್ ಮೇಲಿದ್ದ ಪ್ಲೈವುಡ್ ನ ಪ್ರಭಾವಳಿಯ ತುದಿಗೆ ವಿದ್ಯುತ್ ಲೈನ್ ತಾಕಿ ವಿದ್ಯುತ್ ಅವಗಡ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಯು ದಿ.13.10.2022 ರ ತನ್ನ ಹೇಳಿಕೆಯ ಸಂಪೂರ್ಣ ಭಾಗವನ್ನು ಅಲ್ಲಗಳೆದ ಕಾರಣ, ಸದರಿ ಹೇಳಿಕೆಯ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ನಿಪಿ-8 ಮತ್ತು 9 ರಲ್ಲಿ ಕಾಣುವ ಟ್ರಾಕ್ಟರ್ ನಲ್ಲಿ ನಾನು ಆ ದಿನ ಪ್ರಯಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಟ್ರಾಕ್ಟರ್ ನ ಮಾಲಿಕರಾದ 1 ಮತ್ತು 2 ನೇ ಆರೋಪಿಗಳ ಪರಿಚಯ ನನಗಿದ್ದ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಮತ್ತು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ</u>**

ಅಪಘಾತ ಸಂಭವಿಸಿದ ದಿನ ಜೋರಾದ ಮಳೆ ಇತ್ತು ಎಂದರೆ ಸರಿ. ಆದ ಕಾರಣ ವಿದ್ಯುತ್ ತಂತಿ ಮತ್ತು ಮರಗಳ ರೆಂಬೆ ಕೊಂಬೆಗಳು ಕೆಳಗೆ ಬಾಗಿದ್ದವು ಎಂದರೆ ಸರಿ. ಆ ದಿನ ಜೋರಾದ ಮಳೆಯಿಂದ ವಿದ್ಯುತ್ ತಂತಿಯು ಕೆಳಗೆ ಬಾಗಿದ್ದ ಕಾರಣ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಮೃತಗೊಂಡ ವ್ಯಕ್ತಿಗಳಾದ ಪಾರ್ವತಿ, ರಚನಾ ಮತ್ತು ರಾಜು ಎಂಬುವವರಿಗೆ ಮೆಸ್ಕಾಂ ರವರು ರೂ.5,00,000/- ಗಳಂತೆ ಪರಿಹಾರ ನೀಡಿರುತ್ತಾರೆ ಎಂದರೆ ಸರಿ. ನನಗೂ ಮತ್ತು ಚಾಸಾ-25 ರವರಿಗೆ ರೂ.20,000/- ದಂತೆ ಪರಿಹಾರ ನೀಡುರುತ್ತಾರೆ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.